## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ ---ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

## ಪರಿಶಿಷ್ಟ ಜಾತಿ ವಿದ್ಯಾವಂತ ನಿರುದ್ಯೋಗಿಗಳ ಮತ್ತು ಅವರಿಗಿರುವ ಮೀಸಲಾತಿ ಏರಿಕೆಯ ಬಗ್ಗೆ

೧೭೪೬. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಎಷ್ಟು ?

ಆ) ಪರಿಶಿಷ್ಟ ಜನಾಂಗದ ಪದವಿ ಪಡೆದವರ ಸಂಖ್ಯೆ ಎಷ್ಟು ?

ಇ) ಆ ಪೈಕಿ ಸರ್ಕಾರಿ ಸೇವೆಯಲ್ಲಿರುವವರು ಎಷ್ಟು ?

ಈ) ರಾಜ್ಯದಲ್ಲಿ ಪರಿಶಿಷ್ಟ ಜನಾಂಗದ ಹೆಚ್ಚಳದಿಂದಾಗಿ ಈಗಿರುವ ಶೇ. ೧೮ ಮೀಸಲಾತಿಯನ್ನು ಶೇ. ೨೦ ಮೀಸಲಾತಿಗೆ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೮೪,೨೫,೦೦೦

ಆ) ೫೦೩೮

ಇ) ಮಾಹಿತಿ ಲಭ್ಯವಿಲ್ಲ.

ಈ) ಪರಿಶೀಲನೆಯಲ್ಲಿದೆ.

## ಉದ್ಯೋಗ ವಿನಿಯಮ ಕೇಂದ್ರಗಳ ಬಗ್ಗೆ

೧೬೯೪. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು ?

ಆ) ಕೊಡಗು ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಿಂದ ಈವರೆವಿಗೂ ಉದ್ಯೋಗ ದೊರಕಿರುವ ಅಭ್ಯರ್ಥಿಗಳೆಷ್ಟು ?

ಇ) ಈ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ನೇಮಕಾತಿಗಾಗಿ ಸಂದರ್ಶನಗಳನ್ನು ಯಾವ ಆಧಾರದ ಮೇರೆಗೆ ಕಳುಹಿಸಲಾಗುತ್ತಿದೆ (ಜಿಲ್ಲಾವಾರು, ಹುದ್ದೆವಾರು, ಪುರುಷ, ಮಹಿಳಾವಾರು ಪ್ರತ್ಯೇಕ ಅಂಕಿ ಅಂಶಗಳನ್ನು ನೀಡುವುದು),

ಶ್ರೀ ಎಸ್. ಕೆ ಕಾಂತಾ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ಮೂವತ್ತೆರಡು ಉದ್ಯೋಗ ವಿನಿಮಯ ಕೇಂದ್ರಗಳಿರುತ್ತವೆ.

ಅ) ಕೊಡಗು ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಿಂದ ಈವರೆವಿಗೆ ಅಂದರೆ ಕಳೆದ ಐದು ವರ್ಷಗಳಲ್ಲಿ ಉದ್ಯೋಗ ದೊರಕಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ ಕೆಳಕಂಡಂತಿದೆ.—.

| ಕ್ರಮ ಸಂಖ್ಯೆ | ವರ್ಷ | ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|
| ೧ | ೧೯೮೩ | ೨೩೬ |
| ೨ | ೧೯೮೪ | ೩೬೬ |
| ೩ | ೧೯೮೫ | ೩೫೧ |
| ೪ | ೧೯೪೬ | ೧೩೫ |
| ೫ | ೧೯೮೭ | ೧೧೯ |

ಆ) ಈ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆ ಈ ಮುಂದಿನಂತಿದೆ.—

| ಕ್ರಮ ಸಂಖ್ಯೆ | ವರ್ಷ | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ | ಒಟ್ಟು |
|---|---|---|---|---|
| ೧ | ೧೯೮೩ | ೬೭ | ೨೦ | ೮೭ |
| ೨ | ೧೯೮೪ | ೬೬ | ೨೦ | ೮೬ |
| ೩ | ೧೯೮೫ | ೯೪ | ೩೪ | ೧೨೮ |
| ೪ | ೧೯೮೬ | ೩೬ | ೧೬ | ೫೨ |
| ೫ | ೧೯೮೭ | ೩೯ | ೧೦ | ೪೯ |

ಈ) ಉದ್ಯೋಗ ಮಾತ್ರ ತರಬೇತಿ ಮಹಾ ನಿರ್ದೇಶನಾಲಯ, ಕೇಂದ್ರ ಸರ್ಕಾರ, ನವದೆಹಲಿ ಇವರು ರಚಿಸಿರುವ ''ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ'' ಯಲ್ಲಿ ನೀಡಿರುವ ಸೂಚನೆ ಪ್ರಕಾರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡಿರತಕ್ಕ ಅಭ್ಯರ್ಥಿಗಳನ್ನು ನಿಯೋಜಕರ ಬೇಡಿಕೆ ಅನ್ವಯ ಪುದ್ದೆಗೆ ನಿಗದಿಪಡಿಸಿರತಕ್ಕ ವಿದ್ಯಾರ್ಹತೆ, ಪಯೋಮಿತಿ, ಅನುಭವ, ಮೀಸಲಾತಿ ಇವೇ ಮುಂತಾದ ಅಂಶಗಳನ್ವಯ ನೋಂದಣಿ ಶ್ರೇಷ್ಠತೆಯ ಆಧಾರದ ಮೇರೆಗೆ ಆಯ್ಕೆ ಮಾಡಿ ಸಂದರ್ಶನಕ್ಕೆ ಪುರಸ್ಕರಿಸಲಾಗುತ್ತಿದೆ. ಸಂದರ್ಶನಕ್ಕೆ ಪುರಸ್ಕರಿಸಲಾದ ಅಭ್ಯರ್ಥಿಗಳ ಜಿಲ್ಲಾವಾರು ಪುರುಷ, ಮಹಿಳಾವಾರು ಅಂಕಿಅಂಶಗಳನ್ನು ಅನುಬಂಧ—೧ ರಲ್ಲಿ ಕೊಡಲಾಗಿದೆ.

ಅನುಬಂಧ—೧

೧೯೮೭ನೇ ಸಾಲಿನಲ್ಲಿ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ವಿವಿಧ ಹುದ್ದೆಗಳಿಗೆ ಸಂದರ್ಶನಕ್ಕಾಗಿ ಪುರಸ್ಕರಿಸಲಾದ ಅಭ್ಯರ್ಥಿಗಳ ಜಿಲ್ಲಾವಾರು ಮಾಹಿತಿ.—

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|
| ೧ | ಬೆಂಗಳೂರು | ೭೬,೯೨೮ | ೧೨,೮೭೨ | ೮೯,೮೦೦ |
| ೨ | ಬೆಳಗಾವಿ | ೧೩,೦೭೨ | ೮೯೬ | ೧೩,೯೬೮ |
| ೩ | ಬಳ್ಳಾರಿ | ೩,೭೧೫ | ೩೧೩ | ೪,೦೨೮ |
| ೪ | ಬೀದರ್ | ೨,೩೭೫ | ೫೨೯ | ೨,೯೦೪ |
| ೫ | ಬಿಜಾಪುರ | ೨,೩೪೬ | ೪೫೦ | ೨,೭೯೬ |
| ೬ | ಚಿಕ್ಕಮಗಳೂರು | ೨,೯೦೭ | ೨೮೭ | ೩,೧೯೪ |
| ೭ | ಚಿತ್ರದುರ್ಗ | ೪.೬೯೧ | ೧,೧೯೧ | ೫,೮೮೨ |
| ೮ | ಗುಲ್ಬರ್ಗ | ೪.೭೦೧ | ೨೯೭ | ೪,೯೯೮ |
| ೯ | ಧಾರವಾಡ | ೯.೩೫೪ | ೧,೬೩೮ | ೧೦,೯೯೨ |
| ೧೦ | ದಕ್ಷಿಣ ಕನ್ನಡ | ೭,೧೮೪ | ೧,೫೭೭ | ೮,೭೬೧ |
| ೧೧ | ಉತ್ತರ ಕನ್ನಡ | ೬,೦೬೫ | ೧,೧೩೨ | ೭,೧೯೭ |
| ೧೨ | ಕೋಲಾರ | ೬,೩೪೭ | ೭೨೧ | ೭,೦೬೮ |
| ೧೩ | ಕೊಡಗು | ೧,೯೦೯ | ೬೯೯ | ೨,೬೦೮ |
| ೧೪ | ಮೈಸೂರು | ೫,೭೧೦ | ೬೪೮ | ೬,೩೫೮ |
| ೧೫ | ಹಾಸನ | ೨,೪೦೮ | ೫೨೪ | ೨,೯೩೨ |
| ೧೬ | ಮಂಡ್ಯ | ೨,೪೯೫ | ೩೭೦ | ೨,೮೬೫ |
| ೧೭ | ರಾಯಚೂರು | ೨,೮೭೨ | ೮೬ | ೨,೯೫೮ |
| ೧೮ | ಶಿವಮೊಗ್ಗ | ೩,೬೬೬ | ೬೬೦ | ೪,೩೨೬ |
| ೧೯ | ತುಮಕೂರು | ೬,೭೫೯ | ೫೫೩ | ೭,೩೧೨ |
| | ಒಟ್ಟು ಮೊತ್ತ | ೧,೬೫,೫೦೪ | ೨೫,೪೪೩ | ೧,೯೦,೯೪೭ |

ಸೂಚನೆ.—ಸಂದರ್ಶನಕ್ಕಾಗಿ ಪುರಸ್ಕರಿಸಲ್ಪಟ್ಟ ಅಭ್ಯರ್ಥಿಗಳ ಹುದ್ದೆವಾರು ಮಾಹಿತಿ ಲಭ್ಯವಿಲ್ಲ.

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕ ಮತ್ತು ಬಾಲಕಿಯರಿಗಾಗಿ ವಸತಿ ಹಾಗೂ ಆಶ್ರಮಶಾಲೆಗಳನ್ನು ಒದಗಿಸಿರುವ ಮಾಹಿತಿಗಳು

೨೧೯೪. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕ ಮತ್ತು ಬಾಲಕಿಯರಿಗಾಗಿ ಎಷ್ಟು ವಸತಿ ಹಾಗೂ ಆಶ್ರಮಶಾಲೆಗಳನ್ನು ಕಟ್ಟಲಾಗಿದೆ.

(ಜಿಲ್ಲಾವಾರು ಮಾಹಿತಿ ಒದಗಿಸುವುದು)